ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, ''ರಿಲೇಟಿನೇ ಇಸವಿಯ ಕರ್ನಾಟಕ ರಾಜ್ಯ ಜಿಲ್ಲಾಪರಿಷತ್ತು ಮತ್ತು ತಾಲ್ಲೂಕು ಪಂಚಾಯತ್ ಸಮಿತಿಗಳು ಮತ್ತು ನ್ಯಾಯ ಪಂಚಾಯತಿಗಳ ತಿದ್ದುಪಡಿ ವಿಧೇಯಕಗಳನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

ಪ್ರಸ್ತಾವವು ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

STATEMENT BY THE MINISTER

Appointment of Financial Commission for Zilla Parishath and Taluk Panchayath Samithis.

ಶ್ರೀ ಅಬ್ದುಲ್ ನಜೀರ್‌ಸಾಬ್.—ಮಾನ್ಯ ಅಧ್ಯಕ್ಷರೇ ಒಂದು ವಿಷಯವನ್ನು ನಾನು ಅನೌನ್ಸ್ ಮಾಡಬೇಕೆಂದು ಇದ್ದೇನೆ. ಅದೇನೆಂದರೆ ಜಿಲ್ಲಾಪರಿಷತ್ ಮತ್ತು ಸರ್ಕಾರದ ನಡುವೆ ಒಂದು ಹಣಕಾಸಿನ ನಿಯೋಗವನ್ನು ರಚನೆ ಮಾಡಿದ್ದೇವೆ. ಈ ನಿಯೋಗದ ಅಧ್ಯಕ್ಷರು ಐ.ಎಂ.ಐ. ಅಧ್ಯಕ್ಷರಾದ ಡಾಕ್ಟರ್ ಹೊನ್ನಪ್ಪವರ್‌ರವರು. ಮತ್ತು ನಿವೃತ್ತ ಆಡಿಟರ್ ಜನರಲ್ ಆರ್. ಕೆ. ಚಂದ್ರಶೇಖರ್‌ರವರು ಸದಸ್ಯರಲ್ಲಿ ಒಬ್ಬರು. ರಾಜ್ಯ ಸರ್ಕಾರದ ಗ್ರಾಮೀಣ ಅಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ಶ್ರೀ ಬಿ. ಜಿ. ಪುರಾಣಿಕ್‌ರವರು ಕಾರ್ಯದರ್ಶಿಯಾಗಿರುತ್ತಾರೆಂದು ನಾನು ತಿಳಿಸಬಯಸುತ್ತೇನೆ.

LEGISLATIVE BUSINESS

The Karnataka Lokayukth (Amendment Bill) 1986

Motion to consider

ಶ್ರೀ ಎ.ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ ''ಕರ್ನಾಟಕ ಲೋಕಾಯುಕ್ತ ತಿದ್ದುಪಡಿ, ರಿಲೇಟ ಮಸೂದೆಯನ್ನು ಪರ್ಯಾಲೋಚಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.''

Question was proposed

ಅಧ್ಯಕ್ಷರು.—ಕರ್ನಾಟಕ ಲೋಕಾಯುಕ್ತ ತಿದ್ದುಪಡಿ ವಿಧೇಯಕವನ್ನು ಪುಂಡಿಸಲಾಗಿದೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ ಈಗ ಸಮಯ ೫-೩೦ ನಿಮಿಷ ಗಳಾಯಿತು. ನಾವು ಬೆಳಿಗ್ಗೆ ೧೧-೦೦ ಗಂಟೆಯಿಂದ ಇಲ್ಲಿ ಕುಳಿತುಕೊಂಡಿದ್ದೇವೆ. ನಮ್ಮಲ್ಲಿ ಕೆಲವರು ಬೆಳಿಗ್ಗೆಯಿಂದ ಊಟ ಸಹ ಮಾಡಿಲ್ಲ. ಆದ್ದರಿಂದ ಈ ಸಭೆಯನ್ನು ಮುಂದೂಡಿ ನಾಳೆ ಬೇಕಾದರೆ ತೆಗೆದುಕೊಳ್ಳಿ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ ಇದು ಬಹಳ ಸಣ್ಣ ತಿದ್ದುಪಡಿ ವಿಧೇಯಕ.

ಅಧ್ಯಕ್ಷರು.—ಬೇಗ ಮುಗಿಸಿಬಿಡೋಣ.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಅಧ್ಯಕ್ಷರೇ ಈ ವಿಧೇಯಕದ ಬಗ್ಗೆ ವಿರೋಧಪಕ್ಷದ ಸದಸ್ಯರ ವಿರೋಧ ಇದೆ. ಈ ತಿದ್ದುಪಡಿ ವಿಧೇಯಕದ ಬಗ್ಗೆ ಕೆಲವರು ಮಾತನಾಡುವವರಿದ್ದಾರೆ. ಆದ್ದರಿಂದ ಇದನ್ನು ನಾಳೆ ತೆಗೆದುಕೊಳ್ಳಿ.

ಶ್ರೀ ಎ. ಲಕ್ಷ್ಮೀಸಾಗರ್.—ಆಗಬಹುದು.

ಅಧ್ಯಕ್ಷರು.—ಈಗ ಅರ್ಧ ಗಂಟೆಯ ಚರ್ಚೆಗೆ ಸಂಬಂಧಪಟ್ಟಂತೆ ಮಾನ್ಯ ಮೋಹಿನುದ್ದೀನ್‌ರವರು ಮಾತನಾಡಬಹುದು.